# 'ಎಸಿಸಿ ಕಾಂಕ್ರಿಟ್ ಪ್ಲಸ್'ಬಿಡುಗಡೆ

**ಮೈಸೂರು:** ದೇಶದ ಸಿಮೆಂಟ್ ಉತ್ಪಾದಕ ಸಂಸ್ಥೆ ಎಸಿಸಿ ತನ್ನ ಪರಿಸರ ಸ್ನೇಹಿ ನೂತನ 'ಎಸಿಸಿ ಕಾಂಕ್ರಿಟ್ ಪ್ಲಸ್' ಉತ್ಪನ್ನವನ್ನು ಮೈಸೂರಿನಲ್ಲಿ ಶುಕ್ರವಾರ ಬಿಡುಗಡೆ ಮಾಡಿತು.

'ಅಧಿಕ ವೇಗ, ಅಧಿಕ ಶಕ್ತಿ, ಶಾಶ್ವತ' ಎಂಬ ಘೋಷಣೆಯೊಂದಿಗೆ ಹೊರತಂದಿರುವ ಉತ್ಪನ್ನವನ್ನು ಎಸಿಸಿ ಲಿಮಿಟೆಡ್‌ನ ಆಗ್ನೇಯ ವಲಯ ಮಾರಾಟ ನಿರ್ದೇಶಕ ಪಿ.ಎನ್.ಐಯ್ಯರ್ ಬಿಡುಗಡೆ ಮಾಡಿ, ಗ್ರಾಹಕರ ಸಂತೃಪ್ತಿಗೆ 'ಕಾಂಕ್ರಿಟ್ ಪ್ಲಸ್' ಉತ್ಪನ್ನ ಸಂಸ್ಥೆಯ ಮುಂದಿನ ಹೆಜ್ಜೆ. ಸಾಂಸ್ಕೃತಿಕ ನಗರಿಯ ಗ್ರಾಹಕರಿಗೆ ನೀಡುತ್ತಿರುವುದು ಹೆಚ್ಚು ಖುಷಿ ತಂದಿದೆ.ಗ್ರಾಹಕರು ಮನೆಗಳನ್ನು ಸದೃಢವಾಗಿಯಷ್ಟೇ ಅಲ್ಲದೆ, ಪರಿಸರ ಸ್ನೇಹಿಯಾಗಿ ಕಟ್ಟಲಿ ಎಂಬುದು ಇದರ ಉದ್ದೇಶ ಎಂದರು.

ರಾಜ್ಯದ ವಾಡಿ ಘಟಕದಲ್ಲಿ ದಿನಕ್ಕೆ 12.500 ಟನ್ ಸಿಮೆಂಟ್ ಉತ್ಪಾದನೆಯಾಗುತ್ತಿದ್ದು, ಇದು ಜಾಗತಿಕ ಸಿಮೆಂಟ್ ಉದ್ಯಮದಲ್ಲಿ ಮೈಲಿಗಲ್ಲು ಎಂದು ತಿಳಿಸಿದರು.

ವಿಶೇಷ ವಿನ್ಯಾಸದ 50 ಕಿ.ಲೋ. ಚೀಲದಲ್ಲಿ ಉತ್ಪನ್ನ ಲಭ್ಯವಿದ್ದು, ಇದರೊಂದಿಗೆ ಮೌಲ್ಯವರ್ಧಿತ ಸೇವೆಗಳು ಗ್ರಾಹಕರಿಗೆ ಉಚಿತವಾಗಿ ದೊರೆಯಲಿದೆ ಎಂದು ತಿಳಿಸಿದರು.ಮಾರ್ಕೆಟಿಂಗ್ ಮ್ಯಾನೇಜರ್ ಸಿ. ಆರ್.ಬೈಂದೂರು, ಗ್ರಾಹಕ ಸೇವಾ ವಿಭಾಗದ ರಮೇಶ್ ಪಾಠಕ್ ಹಾಜರಿದ್ದರು.




## ಪ್ಲಸ್ ವಿಶೇಷ...

- ಸಾಮಾನ್ಯ ಪೋರ್ಟ್‌ಲ್ಯಾಂಡ್ ಸಿಮೆಂಟ್ ಕ್ಲಿಂಕರನ್ನು ಅತ್ಯುತ್ತಮ ಗುಣಮಟ್ಟದೊಂದಿಗೆ ಪರಿಷ್ಕರಿಸಿದ ಬೂದಿ ಧೂಳಿನ ಜತೆ ಬೆರೆಸಿ ಪುಡಿ ಮಾಡಿ 'ಕಾಂಕ್ರಿಟ್ ಪ್ಲಸ್' ತಯಾರಿಸಲಾಗುತ್ತದೆ. ಹಾಗಾಗಿ ಇದು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುತ್ತದೆ.
- ಇದು ಕೇಂದ್ರೀಯ ತಂತ್ರಜ್ಞಾನ ಕೇಂದ್ರದ ಶ್ರಮದ ಫಲ. ಹೆಚ್ಚು ಬಂಧ, ಬಾಳಿಕೆ ಮತ್ತು ಬಲಪಡಿಸಿದ ಸಿಮೆಂಟ್ ಕಾಂಕ್ರಿಟ್‌ನ ಕೆಲಸಕ್ಕೆ ಅತ್ಯಂತ ಸೂಕ್ತವಾದುದು. ಈಗಾಗಲೇ ಬೆಂಗಳೂರು, ನಾಗಪುರ, ಅಮರಾವತಿಗಳಲ್ಲಿ ಯಶಸ್ವಿಯಾಗಿದ್ದು, ಮೈಸೂರಿನಲ್ಲಿ ಪರಿಚಯಿಸಲಾಗುತ್ತಿದೆ.